# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ (ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆ 5017/2018

ಪಿರ್ಯಾದುದಾರ ಃ ಅರಕೆರೆ ಪೊಲೀಸ್ ಠಾಣೆ.

[

ವಿರುದ್ದ

ಆರೋಪಿ

ಸಣ್ಣಬೋರಯ್ಯ ಉಃ ಬೋರ ಬಿನ್ ಲೇಟ್ ಜವರಯ್ಯ

40 ವರ್ಷ,

ವಾಸಃ ಅರಕೆರೆ ಗ್ರಾಮ ,

ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ

## ತಿದ್ದುಪಡಿ ದೋಷಾರೋಪಣೆ

ಶ್ರೀ ಗೋಪಾಲಕೃಷ್ಣ ರೈ ಟಿ. ಬಿ.ಎ. ಎಲ್.ಎಲ್.ಬಿ. ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮಂಡ್ಯ (ಆಸೀನ ಶ್ರೀರಂಗಪಟ್ಟಣ) ರವರಾದ ನಾನು ಆರೋಪಿಯಾದ ನಿನ್ನ ವಿರುದ್ದ ಈ ಕೆಳಗಿನಂತೆ ದೋಷಾರೋಪಣೆಯನ್ನು ರಚಿಸುತ್ತಿದ್ದೇನೆ.

ನಿಮ್ಮ ಹೆಂಡತಿಯಾದ ಜಯಕುಮಾರಿಯವರು ಬೇರೆಯವರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರಬಹುದು ಎಂಬ ವಿಚಾರದಲ್ಲಿ ನೀನು ಆಕೆಯ ಜೊತೆಯಲ್ಲಿ ಆಗಾಗ್ಗೆ ಗಲಾಟೆ ಮಾಡಿಕೊಂಡಿದ್ದು, ದಿಃ 11.8.2017 ರಂದು ಬೆಳಗ್ಗೆಯಿಂದ ಆಕೆ ಊಟ ಮಾಡಿ ಬಡಿಸದೇ ಇದ್ದ ಕಾರಣ ಸಂಜೆ 4 ಗಂಟೆಯ ನಂತರ ನೀನು ಸ್ವತಃ ಊಟ ಬಡಿಸಿಕೊಳ್ಳಲು ಹೋದಾಗ ಆಕೆ ತಾನು ಮಾಡಿದ ಅಡುಗೆ ಊಟ ಮಾಡಬೇಡ ಎಂದು ತಟ್ಟೆ ಕಿತ್ತುಕೊಂಡಿದ್ದು ನಂತರ ನೀನು ಸ್ವತಃ ಅನ್ನ ಮಾಡಿ ಊಟ ಮಾಡಿದ್ದು ಆ ಸಂದರ್ಭದಲ್ಲಿ ನಿನ್ನ ಹೆಂಡತಿ ತವರುಮನೆಗೆ

ಹೋಗಬೇಕು ಎಂದು ಹೇಳಿದಾಗ  ನೀನು ನನಗೆ ಊಟ ತಿಂಡಿ ಮಾಡಿಕೊಡದೇ ಇದ್ದ ಮೇಲೆ ಬದುಕಿರುವುದಕ್ಕಿಂತ ಸಾಯುವುದೇ ಮೇಲು ಎಂದು ಬೈದು ಆಕೆಯ ಕಪಾಲಕ್ಕೆ ಹೊಡೆದಾಗ ಆಕೆ ಕೆಳಗೆ ಬಿದ್ದಿದ್ದು ನೀನು ಆಕೆಯ ಕಾಲುಗಳನ್ನು ಹಿಡಿದುಕೊಂಡು ಎಳೆದುಕೊಂಡು ರೂಂಗೆ ಹೋಗಿ ಬೀರುವಿನಲ್ಲಿದ್ದ ಒಂದು ಸೀರೆಯನ್ನು ತೆಗೆದು ಆಕೆಗೆ ನೇಣುಹಾಕಿ ಸಾಯಿಸಿರುತ್ತೀ ಮತ್ತು ಈ ಕಾರಣಕ್ಕಾಗಿ ಆರೋಪಿಯಾದ ನೀನು  ಭಾರತ ದಂಡ ಸಂಹಿತೆ ಕಲಂ 302 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವಿ.

ಆರೋಪಿಯಾದ ನೀನು ಈ ಮೇಲಿನ ದೋಷಾರೋಪಣೆಯ ಬಗ್ಗೆ ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತಿದ್ದೇನೆ.

(ಗೋಪಾಲಕೃಷ್ಣ ರೈ ಟಿ.)
ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ)